

# ರಘುರಾಮ ಬಸ್ ಹರಿದು ಅಪ್ಪಚ್ಚಿ

ದಿಂಡಿನಕಾಯಿ ಉದುರೋ ಕಾಲಕ್ಕೆ ನಾನು ಇಲ್ಲಿ ಬೇಕಿತ್ತು ಕಣ್ರೀ, ಅನ್ಯಾಯಾತು.. ಬಸುರಿ ಯುವತಿ ಬಾಯ್ಬಿಟ್ಟು ಹೇಳಿದ್ದಳು.

ನಿಂಗೆ ತಂದ್ಕೊಟ್ರೆ ಸೈಯಲ್ಲ, ನಾನಿರೋದು ಮತ್ತೆಂತಕ್ಕೆ? ಮಡದಿಯ ಕಡೆ ಕಣ್ಣು ಹೊಡೆದು ರಾಮಚಂದ್ರ ಇಷ್ಟು ಹೇಳಿ ಮುಗಿಸುವುದಕ್ಕಿಲ್ಲ, ಧೊಪ್ಪನೆ ಸದ್ದು. ಅಯ್ಯಯ್ಯೋ... ಎನ್ನುತ್ತಾ ರಾಮಚಂದ್ರ ಧಾವಿಸಿ ಮರದಿಂದ ಕೆಳಗೆ ಬಿದ್ದವನನ್ನು ಹಿಡಿದೆತ್ತಿದರೆ ಮೈಕೈಗಂಟಿದ ಮಣ್ಣನ್ನು ಒದರುತ್ತಾ, ಪೆಕರುಪೆಕರಾಗಿ ನಗುತ್ತಾ, ಎದ್ದು ನಿಂತಿದ್ದ ರಘುರಾಮ.

ಚಿಗಳಿ ಹಿಂಡು ಮಾರಾಯಾ. ಕೊಟ್ಟೆ ಮೇಲೆ ಕಾಲಿಟ್ಟೆ ಅಂತ ಕಾಣುತ್ತೆ, ಹತ್ಗಂಡೇಬಿಡೋದಾ?

ಒಳ್ಳೇ ಗ್ರಾಸ್ತ ನೀನು. ಚಿಗುಳಿ ಎರು ಹತ್ಗಂತು ಅಂತ ಕೊಂಬೆ ಕೈ ಬಿಡೋದಾ? ಏನಾಗ್ಲಿಲ್ಲ ತಾನೇ?